**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ , ಉಡುಪಿ ಜಿಲ್ಲೆ , ಉಡುಪಿ</u>**

<u>ಸೆಷನ್ಸ್ ಕೇಸ್ ನಂಃ 3/2021</u> <u>ಪಿ.ಡಬ್ಲ್ಯೂಃ 4</u>

<u>ಸಿ.ಡಬ್ಲ್ಯೂಃ 5</u>

| | |
|---|---|
| ಸಾಕ್ಷಿದಾರರ ಹೆಸರು | ಮೊಹಮದ್ ಆಸೀಫ್ |
| ತಂದೆಯ ಹೆಸರು | ಅಬ್ದುಲ್ ಖಾದರ್ |
| ವಯಸ್ಸು | 30 ವರ್ಷ |
| ಉದ್ಯೋಗ | ಚಾಲಕ |
| ವಿಳಾಸ | ಎಸ್.ಎಸ್. ರೋಡ್, ಹೆಜಮಾಡಿ |

ದಿನಾಂಕಃ 23-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನಾನು ಹೆಜವಮಾಡಿಯ ಕರ್ನಿರೆ ಮಸೀದಿಯ ಬಳಿ ವಾಸವಾಗಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಸಹ ಮಸೀದಿಯ ವಠಾರದಲ್ಲಿ ಬಾಡಿಗೆಗೆ ವಾಸವಾಗಿದ್ದರು. ಮೃತ ಸದಾಕತ್ ಅನ್ಸಾರಿ ಈತನ ಪರಿಚಯ ಇದೆ. ಆತ 1 ನೇ ಆರೋಪಿಯ ಗಂಡ, 2 ನೇ ಅರೋಪಿಯ ಅಣ್ಣ. 2 ನೇ ಅರೋಪಿ ಟೈಲ್ಸ ಕೆಲಸ ಮತ್ತು ಮೃತ ಗಾರೆ ಕೆಲಸ ಮಾಡುತ್ತಿದ್ದ. ಅವರು ಜಾರ್ಖಾಂಡದವರು.

2) ದಿನಾಂಕ 21-05-2020 ರಂದು ರಾತ್ರಿ 1.45 ರ ಸಮಯದಲ್ಲಿ ನಾನು ಮನೆಯಲ್ಲಿ ಮಲಗಿದ್ದೆ, ಆಗ 2 ನೇ ಆರೋಪಿ ಮತ್ತು ಚಾಸಾ-8 ಬಂದು ಮನೆಯ ಬಾಗಿಲು ಬಡಿದಿದ್ದರು. ನಾನು ವಿಚಾರಿಸಿದಾಗ 1 ನೇ ಅರೋಪಿಯ ಗಂಡ ಹೆಜಮಾಡಿಯ ಗುಂಡಿ ರಸ್ತೆಯ ಬದಿಯಲ್ಲಿರುವ ತೋಡಿನಲ್ಲಿ ಬಿದ್ದಿರುವುದಾಗಿ ಹೇಳಿದ್ದರು. ಆತನನ್ನು ಅಲ್ಲಿಂದ ಆಸ್ಪತ್ರೆಗೆ ಸೇರಿಸಲು ನನ್ನ ಕಾರಿನ ಅವಶ್ಯಕತೆ ಇರುವುದಾಗಿ ಹೇಳಿದರು. ಆಗ ನಾನು, 2 ನೇ ಅರೋಪಿ, ಚಾಸಾ-8 ಇವರೊಂದಿಗೆ ಅಲ್ಲಿಗೆ ಹೋಗಿದ್ದೆವು. ನಾವು ನೋಡಿದಾಗ ಅಲ್ಲಿ ಬೈಕ್ ಸಮೇತ 1 ನೇ ಆರೋಪಿಯ ಗಂಡ ಬಿದ್ದಿದ್ದ. ನಾನು ಮತ್ತು ಚಾಸಾ -8 ತೋಡಿಗೆ ಇಳಿದು ಆತನನ್ನು ಎತ್ತಿಕೊಂಡು ಕಾರಿಗೆ ಹಾಕಿದ್ದೆವು. ನಾನು ನೋಡಿದಾಗ ಆತ ಮಾತನಾಡುತ್ತಿರಲಿಲ್ಲ. ಆತನ

ಕುತ್ತಿಗೆಯಲ್ಲಿ ಗಾಯಗಳು ಇತ್ತು. ಬೇರೆ ಕಡೆ ಗಾಯಗಳನ್ನು ನಾನು ಗಮನಿಸಲಿಲ್ಲ. ನಾನು , ಚಾಸಾ-8, 2 ನೇ ಆರೋಪಿ ಮತ್ತು 1 ನೇ ಆರೋಪಿಯ ಗಂಡನೊಂದಿಗೆ ಪಡುಬಿದ್ರೆಯ ಸಿದ್ದಿವಿನಾಯಕ ಆಸ್ಪತ್ರೆಗೆ ಹೋಗಿದ್ದೆವು. ಆಗ ನಮ್ಮೊಂದಿಗೆ ಆಸ್ಪತ್ರೆಗೆ ಚಾಸಾ-6 ಸಹ ಬಂದಿದ್ದರು. ನಾನು ಅಲ್ಲಿ ಡಾಕ್ಟರಿಗಾಗಿ ವಿಚಾರಿಸಿದ್ದೆ ಅಲ್ಲಿದ್ದ ನರ್ಸ್ ಡಾಕ್ಟರ್ ಇಲ್ಲ ಎಂದು ಹೇಳಿದ್ದರು. ಅಲ್ಲಿಂದ ಕಾಪುವಿನ ಪ್ರಶಾಂತ್ ಆಸ್ಪತ್ರೆಗೆ ಕರೆತಂದಿದ್ದೆವು. ಅಲ್ಲಿಯೂ ಡಾಕ್ಟರ್ ಇರಲಿಲ್ಲ, ಆದ್ದರಿಂದ ಅಜ್ಜರಕಾಡಿನ ಸರಕಾರಿ ಆಸ್ಪತ್ರೆಗೆ ಕರೆತಂದಿದ್ದೆವು. ಅಲ್ಲಿ ತಪಾಸು ಮಾಡಿದಾಗ, ಗಾಯಾಳುವಿನ ಪಲ್ಸ್ ಇಲ್ಲ ಎಂದು ಹೇಳಿದ್ದರು. ಆತನ ಶವವನ್ನು ಇಟ್ಟುಕೊಳ್ಳಲು ಜಾಗೆ ಇಲ್ಲ ಎಂದು ಹೇಳಿದ್ದರು, ಅದಕ್ಕಾಗಿ ಕೆಎಂಸಿಗೆ ಕರೆದುಕೊಂಡು ಹೋಗಲು ಹೇಳಿದ್ದರು. ಅದರಂತೆ ಆತನನ್ನು ಕೆಎಂಸಿಯ ಶವಗಾರಕ್ಕೆ ಬಿಟ್ಟು ನಾನು ಮನೆಗೆ ಮರಳಿದೆ.

3) 2 ನೇ ಆರೋಪಿ ಈ ವಿಷಯವಾಗಿ ದೂರು ಕೊಟ್ಟಿದ್ದರು ಎಂದು ತಿಳಿದಿತ್ತು. 2 ನೇ ಅರೋಪಿಯ ಅಣ್ಣನಿಗೆ ಅಪಘಾತವಾಗಿ ಬಿದ್ದಿದ್ದನು ಎಂದು ದೂರು ಕೊಟ್ಟಿದ್ದನು ಎಂದು ತಿಳಿದಿತ್ತು. 2 ನೇ ಅರೋಪಿ ಆತನ ಅಣ್ಣನನ್ನು ತೋಡಿನಿಂದ ತೆಗೆಯುವಾಗ ಕೆಳಗೆ ಬಂದಿರಲಿಲ್ಲ, ಕಾರಿಗೆ ಹಾಕುವಾಗಲೂ ಸಹ ಜೊತೆಗೆ ಬಂದಿರಲಿಲ್ಲ, ಆಗ ಆತ ಫೋನ್ ನಲ್ಲಿ ಮಾತನಾಡುತ್ತಿದ್ದ.

(ಈ ಸಮಯದಲ್ಲಿ ಮತ್ತು ಈ ಮೊದಲೂ ಕೂಡಾ ಸಾಕ್ಷಿಯ ಮಾತುಗಳು ಸ್ಪಷ್ಟವಾಗಿ ಬಾರದೇ, ಶಬ್ದ ಮತ್ತು ಅಕ್ಷರಗಳನ್ನು ನುಂಗಿ ಮಾತನಾಡುತ್ತಿರುವಂತೆ ಕಂಡುಬರುತ್ತಿದ್ದು, ವಿಚಾರಣೆಗೆ ಅನಾವಶ್ಯಕ ವೇಳೆಯಾಗುತ್ತಿರುವುದರಿಂದ ಈ ಹೊತ್ತಿನ ಮಟ್ಟಿಗೆ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್. ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ